# ದತ್ತಪ್ಪಚ್ಚಿಯ ಯಕ್ಷಪ್ರೀತಿ

ಶಿರಸಿ ತಾಲ್ಲೂಕಿನ ದತ್ತಾತ್ರೇಯ ಸುಬ್ರಾಯ ಹೆಗಡೆ ಯಕ್ಷಗಾನ ಕಲೆಯ ಅಭಿಮಾನಿ. ಆ ಕಲಾಪ್ರೀತಿಯೇ ಯಕ್ಷಗಾನ ಕುರಿತ ಸಾವಿರಾರು ಬರಹಗಳನ್ನು ಸಂಗ್ರಹಿಸಲು ಪ್ರೇರಣೆಯಾಗಿದೆ.

■ ಗಣಪತಿ ಹಾಸ್ಪುರ









ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಹುಳಗೋಳದ ನಿವಾಸಿಯಾದ ದತ್ತಾತ್ರೇಯ ಸುಬ್ರಾಯ ಹೆಗಡೆ ಅವರು 'ದತ್ತಪ್ಪಚ್ಚಿ' ಎಂದೇ ಸ್ನೇಹವಲಯದಲ್ಲಿ ಪರಿಚಿತರು. ದತ್ತಪ್ಪಚ್ಚಿ ವೃತ್ತಿಯಿಂದ ಕೃಷಿಕರು. ಪ್ರವೃತ್ತಿಯಿಂದ ಯಕ್ಷಗಾನದ ಕುರಿತ ಬರಹಗಳ ಸಂಗ್ರಾಹಕರು.

1970ರಿಂದ ಇಲ್ಲಿಯವರೆಗೆ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡ ಯಕ್ಷಗಾನದ ನೂರಾರು ಲೇಖನಗಳು, ಯಕ್ಷಗಾನ ಪ್ರದರ್ಶನದ ಹ್ಯಾಂಡ್‌ಬಿಲ್‌ಗಳ ಅದ್ಭುತ ಸಂಗ್ರಹ ದತ್ತಪ್ಪಚ್ಚಿ ಅವರ ಬಳಿಯಿದೆ. ಈ ಬರಹಗಳ ಸಂಗ್ರಹ ಯಕ್ಷಲೋಕದ ಕುರಿತ ಚೆಲ್ಲಾಪಿಲ್ಲಿ ಇತಿಹಾಸವನ್ನು ಕಟ್ಟಿಕೊಡುವಂತಿದೆ.

ಯಕ್ಷಕಲೆಯ ಮೇಲೆ ದತ್ತಪ್ಪಚ್ಚಿ ಅವರಿಗೆ ಅಪಾರ ಪ್ರೀತಿ. ಹಾಗೆಂದು ವೇಷಭೂಷಣ ಧರಿಸಿಕೊಂಡು, ಥಕಥೈ ಎಂದು ಕುಣಿಯುವ ಕಲಾವಿದರು ಅವರಲ್ಲ. ಅರ್ಥದಾರಿಕೆಯಲ್ಲಿ ತೊಡಗಿಕೊಂಡ ವಾಗ್ಮಿಯೂ ಅಲ್ಲ. ಭಾಗವತಿಕೆ, ಮೃದಂಗ ಅಥವಾ ಚಂಡೆಯ ನುಡಿಸುವುದೂ ಅವರಿಗೆ ತಿಳಿದಿಲ್ಲ. ಯಕ್ಷಗಾನವನ್ನು ವೀಕ್ಷಿಸಿ ಯಕ್ಷಕಲೆ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸುವ ಅಪ್ಪಟ ಗ್ರಾಮೀಣ ಪ್ರದೇಶದ ಅಭಿಮಾನಿ ದತ್ತಪ್ಪಚ್ಚಿ. ಈ ಅಭಿಮಾನವೇ ಯಕ್ಷಗಾನಕ್ಕೆ ಸಂಬಂಧಿಸಿದ ಪತ್ರಿಕಾ ಲೇಖನಗಳನ್ನು ಸಂಗ್ರಹಿಸುವುದಕ್ಕೆ ಪ್ರೇರಣೆಯಾಗಿದೆ.

ಚಿಕ್ಕಂದಿನಿಂದಲೂ ಯಕ್ಷಗಾನವನ್ನು ವೀಕ್ಷಿಸಿ ಸಂಭ್ರಮಿಸುತ್ತಿದ್ದ ಇವರಿಗೆ, ತನ್ನ ಮೆಚ್ಚಿನ ಕಲೆಗೆ ಏನಾದರೂ ಕೊಡುಗೆ ನೀಡಬೇಕೆಂಬ ಆಸೆಯಿತ್ತು. ಅಕ್ಕಪಕ್ಕದ ಊರುಗಳಲ್ಲಿ ಯಕ್ಷಗಾನ ಪ್ರದರ್ಶನಗಳು ನಿರಂತರವಾಗಿ ನಡೆಯುತ್ತಿದ್ದವು. ಆ ಪ್ರದರ್ಶನಗಳ ಕರಪತ್ರಗಳನ್ನು ದತ್ತಾತ್ರೇಯ ಹೆಗಡೆ ಸಂಗ್ರಹಿಸಲು ಆರಂಭಿಸಿದರು. ನಂತರದ ಹಂತದಲ್ಲಿ, ಯಕ್ಷಗಾನಕ್ಕೆ ಸಂಬಂಧಿಸಿದ ವಿಷಯಗಳು ಯಾವುದೇ ಪತ್ರಿಕೆಗಳಲ್ಲಿ ಪ್ರಕಟವಾಗಲಿ, ಅವುಗಳನ್ನು ಸಂಗ್ರಹಿಸತೊಡಗಿದರು.

ಶಂಭು ಹೆಗಡೆ, ಚಿಟ್ಟಾಣಿ, ಮಾಬ್ಲ ಹೆಗಡೆ, ಎಟ್ಟರ್ ಜೋಶಿ, ಪರಮಯ್ಯ ಹಾಸ್ಯಗಾರ, ಕೃಷ್ಣ ಹಾಸ್ಯಗಾರ, ಕಾಳಿಂಗ ನಾವುಡ, ಕೃಷ್ಣ ಭಾಗವತ ಕಡತೋಕ, ಉಪ್ಪೋಣಿ ನಾರಾಯಣ ಭಾಗವತ, ಸಾಲ್ಕೋಡ ಗಣಪತಿ ಹೆಗಡೆ, ಕುಂಜಾಲು ರಾಮಕೃಷ್ಣ, ಶೇಣಿ ಗೋಪಾಲಕೃಷ್ಣ – ಹೀಗೆ, ಯಕ್ಷಲೋಕದ ಸುಪ್ರಸಿದ್ಧ ಕಲಾವಿದರಿಂದ ಹಿಡಿದು ಈ ಕಾಲದ ಯಕ್ಷಪಟುಗಳ ಬಗ್ಗೆ ವಿವಿಧ ಪತ್ರಿಕೆಗಳಲ್ಲಿ ಬಂದಿರುವ ಬರಹಗಳು ದತ್ತಪ್ಪಚ್ಚಿ ಅವರ ಸಂಗ್ರಹದಲ್ಲಿವೆ. ನಾಲ್ಕು ದಶಕಗಳ ಹವ್ಯಾಸದಿಂದಾಗಿ, ಸಾವಿರಾರು ಯಕ್ಷಗಾನ ಲೇಖನಗಳ ಬೃಹತ್ ಸಂಗ್ರಹ ಅವರಲ್ಲಿ ರೂಪುಗೊಂಡಿದೆ. ಯಕ್ಷಗಾನ ಅಕಾಡೆಮಿಯಲ್ಲಿಯೂ ಇಷ್ಟೊಂದು ಪ್ರಮಾಣದ ದಾಖಲೆಗಳು ದೊರೆಯಲಿಕ್ಕಿಲ್ಲ.

ಸಂಗ್ರಹಿಸಿದ ಲೇಖನಗಳನ್ನು ಹಾಳಾಗದಂತೆ ಜತನವಾಗಿ ಇರಿಸಿಕೊಳ್ಳಲು ಅವರು ಪಡುತ್ತಿರುವ ಶ್ರಮ ದೊಡ್ಡದು. ಸಂಸ್ಥೆಯೊಂದು ಮಾಡಬಹುದಾದ ಕೆಲಸವನ್ನು ವ್ಯಕ್ತಿಯೊಬ್ಬರು ಮಾಡಿದ್ದಾರೆ. ಯಕ್ಷಗಾನ ವಿದ್ಯಾರ್ಥಿಗಳು ಮತ್ತು ಅಧ್ಯಯನ ನಡೆಸುವವರಿಗೆ ದತ್ತಪ್ಪಚ್ಚಿ ಅವರ ಸಂಗ್ರಹ ಅಮೂಲ್ಯ ಆಕರವಾಗಬಲ್ಲದು.

ಪ್ರತಿಕ್ರಿಯಿಸಿ: feedback@sudha.co.in